www.ecourtsindia.com

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್ ಸಂಖ್ಯೆ.**427/2022** ಪಿ.ಡಬ್ಲೂ .1

ದಿನಾಂಕಃ 10-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದೂವರೆದ ಪಾಟೀ ಸವಾಲುಃ- **1** ಮತ್ತು **4** ನೇ ಪ್ರತಿವಾದಿ ಪರ ವಕೀಲರಿಂದಃ-

ನಿಪಿ. 5 ರಲ್ಲಿ ಒಟ್ಟು ವಿಸ್ತೀರ್ಣ 10-20 ಗುಂಟೆ ಎಂದು ಬರೆದಿದೆ ಎಂದರೆ ಸರಿ. ಅದೇ ರೀತಿ ಕಾಲಂ ನಂ. 9 ರಲ್ಲಿ 3 ನೇ ಪ್ರತಿವಾದಿಯ ಹೆಸರಿನಲ್ಲಿ 2-22 ಗುಂಟೆ ನಮೂದು ಇದೆ ಎಂದರೆ ಸರಿ. ಒಟ್ಟ 10-20 ಗುಂಟೆಯಲ್ಲಿ 2-22 ಗುಂಟೆ ಹೋದಲ್ಲಿ 7-38 ಗುಂಟೆ ಉಳಿಯುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಗೆ 1983-84 ರಲ್ಲಿ 7-38 ಗುಂಟೆ ಮಾತ್ರ ಜಮೀನು ಇತ್ತು ಎಂದರೆ ಹೌದು. ಸದರಿ 2 ನೇ ಪ್ರತಿವಾದಿಯೇ 1992 ರಲ್ಲಿ ನಮಗೆ ಕ್ರಯ ಪತ್ರ ಬರೆದುಕೊಟ್ಟಿರುವುದು ಎಂದರೆ ಸರಿ. 2 ನೇ ಪ್ರತಿವಾದಿ ಬೇರೆ ಯಾರಿಂದಲೂ ಸರ್ವೆ ನಂ. 35 ರಲ್ಲಿ ಯಾವುದೇ ಜಮೀನು ಖರೀದಿಸಿಲ್ಲ ಎಂದರೆ ಹೌದು. ನಿಪಿ. 5 ರಲ್ಲಿ ವಾದಿಯ ಹೆಸರು ನಮೂದು ಇಲ್ಲ ಎಂದರೆ ಹೌದು. ನಿಪಿ. 6 ರಿಂದ 8 ರ ದಾಖಲೆಗಳು OS.48/1953 ರ ದಾವೆಗೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಯಾಗಲೀ, 1, 3 ಮತ್ತು 4 ನೇ ಪ್ರತಿವಾದಿಗಳಾಗಲೀ ಪಕ್ಷಗಾರರಲ್ಲ ಎಂದರೆ ಹೌದು. ನಿಪಿ. 8 ರಲ್ಲಿ ಅಬ್ದುಲ್ ಅಜೀಜ್ ರವರು ಸದರಿ ದಾವೆಯನ್ನು ವಜಾ ಮಾಡುವಂತೆ ತಕರಾರು ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ. 9 ರ ಅರ್ಜಿ ಪುರಸ್ಕಾರವಾಗಿದೆ ಎಂದರೆ ಹೌದು. ನಿಪಿ. 9 ಮತ್ತು 10 ರ ಪ್ರಕರಣಗಳಲ್ಲಿ ವಾದಿಯಾಗಲೀ, 1, 3 ಮತ್ತು 4 ನೇ ಪ್ರತಿವಾದಿಗಳಾಗಲೀ ಪಕ್ಷಗಾರರಲ್ಲ ಎಂದರೆ ಹೌದು. ನಿಪಿ. 10 ರಲ್ಲಿ 5-5 ಗುಂಟೆ ಜಮೀನು ಯುಸುಫ್ ಖಾನ್ ರವರು ಮಾಲೀಕರು ಎಂದು ಬರೆದಿದೆ ಎಂದರೆ ಸರಿಯಲ್ಲ.

ನಿಪಿ. 11 ರಲ್ಲಿ ವಾದಿ ಹೆಸರು ನಮೂದು ಇಲ್ಲ ಎಂದರೆ ಸರಿ. ನಿಪಿ. 11 ರಲ್ಲಿ ಆಸ್ತಿಯ ವಿಸ್ತೀರ್ಣ ಬರೆದಿಲ್ಲ ಎಂದರೆ ಸರಿ. ಖಾತೆ ನಂಬರ್ ಬರೆದಿದೆ. ನಾನು ಹಾಜರು ಮಾಡಿರುವ ದಾಖಲೆಗಳೆಲ್ಲವೂ ಸತ್ಯವಾಗಿರುತ್ತವೆ ಎಂದರೆ ಸರಿ. ನಾನು ಹಾಜರು ಮಾಡಿರುವ ರೆಕಾರ್ಡ ಆಫ್ ರೈಟ್ಸ್ ನಲ್ಲಿ 2 ನೇ ಪ್ರತಿವಾದಿಯ ಹೆಸರು ನಮೂದು ಇದೆ ಎಂದರೆ ಸರಿ. ದಾಖಲೆಯನ್ನು ಸಾಕ್ಷಿ ಗುರುತಿಸಿದ ಕಾರಣ

This is a True Copy of the Court Records Online. Authenticated @ districts.ecourtsindia.com/cnr/KABR510017902022/truecopy/order-5.pdf

ಅದನ್ನು ನಿಪಿ. 12(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಯುಸುಫ್ ಖಾನ್ ಬಿನ್ ಸಾಹೇಬ್ ಖಾನ್ ಎಂದು ನಮೂದು ಇದೆ ಎಂದರೆ ಸರಿ. ಸದರಿ OS. 48/1953 ರ ದಾವೆಯನ್ನು 5-5 ಗುಂಟೆ ಜಮೀನಿಗೆ ಸಲ್ಲಿಸಿದ್ದು, ರಾಜೀ ಮಾಡಿಕೊಂಡಿರುತ್ತಾರೆ ಎಂದು ಮೂಂದೂವರೆದು ನುಡಿಯುತ್ತಾರೆ. ನಿಪಿ. 13 ನ್ನು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಸಾಹೇಬ್ ಖಾನ್ ರವರು ತನ್ನ ಹೆಂಡತಿಗೆ ಮಹರ್ ಕೊಟ್ಟಿರುವ ಬಗ್ಗೆ ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಈ ದಾವೆಗಾಗಿ ಸೃಷ್ಟಿಸಿರುತ್ತೇವೆ ಎಂದರೆ ಸುಳ್ಳು. ನಿಪಿ. 13 ರಂತೆ ಪಹಣಿ ಮತ್ತು ಮ್ಯುಟೇಷನ್ ಆಗಿರುವ ಬಗ್ಗೆ ದಾಖಲೆ ಇಲ್ಲ. ನಿಪಿ. 15 ರ ದಾಖಲೆ ಏನು ಎಂದು ನನಗೆ ಹೇಳಲು ಆಗುವುದಿಲ್ಲ. ಅದರಲ್ಲಿ ವಾದಿಯ ಹೆಸರು ಇಲ್ಲ ಎಂದರೆ ಸರಿ. ನಿಪಿ. 16-17 ರಲ್ಲಿ ನಮೂದಾಗಿರುವ ಜೈನಾಬೀ ರವರಿಗೆ ಸಂಬಂಧಿಸಿದ ಕ್ರಯ ಪತ್ರ ಹಾಜರು ಮಾಡಿದ್ದು, ಪಹಣಿ ಮತ್ತು ಮ್ಯುಟೇಷನ್ ಹಾಜರು ಮಾಡಿಲ್ಲ. ನಿಪಿ. 18 ರಲ್ಲಿ ವಾದಿಯ ಹೆಸರು ಇಲ್ಲ ಎಂದರೆ ಹೌದು. ಸದರಿ ಪಹಣಿಯಲ್ಲಿ ತಪ್ಪಾಗಿ ನಮೂದಾಗಿದ್ದು, ತಿದ್ದುಪಡಿ ಮಾಡಿಸಿದ್ದೇನೆ. ಆ ರೀತಿ ತಿದ್ದುಪಡಿ ಮಾಡಿಸಿದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ನಿಪಿ. 18 ರಲ್ಲಿ 2 ನೇ ಪ್ರತಿವಾದಿ ಹೆಸರಿನಲ್ಲಿ 33 ಗುಂಟೆ ನಮೂದು ಇದೆ ಎಂದರೆ ಹೌದು. 2 ನೇ ಪ್ರತಿವಾದಿಗೆ ಕೇವಲ 33 ಗುಂಟೆ ಮಾತ್ರ ಜಮೀನು ಇತ್ತು ಎಂದರೆ ಸುಳ್ಳು. ನಿಪಿ. 19 ರಲ್ಲಿ ವಾದಿಯ ಹೆಸರಿಗೆ 33 ಗುಂಟೆ ನಮೂದು ಇದೆ ಎಂದರೆ ಹೌದು. ಸದರಿ ಜಮೀನನ್ನು ದರ್ಗಾಕ್ಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ಜಮೀನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ. 20 ರ ಪ್ರಕರಣದಲ್ಲಿ ಪ್ರತಿವಾದಿ 1 ಮತ್ತು 4 ರವರು ಪಕ್ಷಗಾರರಲ್ಲ ಎಂದರೆ ಸರಿ. ನಿಪಿ. 20 ದಾವಾ ಆಸ್ತಿಗೆ ಸಂಬಂಧಿಸಿದ ಪ್ರಕರಣ ಅಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಸರ್ವೆ ನಂ. 35/4 ರ 33 ಗುಂಟೆಗೆ ಮಾತ್ರ ಸಲ್ಲಿಸಿರುವುದು ಎಂದರೆ ಸರಿ.

ಅಲ್ಲಾ ಭಕ್ಷ ರವರಿಗೆ 4-23 ಗುಂಟೆ ಜಮೀನು ಮಾರಾಟ ಮಾಡಿದ್ದೇನೆ. ನಿಪಿ. 20 ರ ದಾವೆ ವಜಾ ಆಗಿದೆ ಎಂದರೆ ಸರಿಯಲ್ಲ. ಸದರಿ ಆದೇಶದ ದಾಖಲೆಯನ್ನು ಹಾಜರು ಮಾಡಲು ತೊಂದರೆ ಇಲ್ಲ. ಸದರಿ ಆದೇಶದ ವಿರುದ್ಧ ಸಲ್ಲಿಸಿದ ನಿಪಿ. 21 ರ ಮೇಲ್ಮನವಿ ಸಹ ವಜಾ ಆಗಿದೆ ಎಂದರೆ ಸರಿಯಲ್ಲ. ನಿಪಿ. 20 ಮತ್ತು 21 ರ ಪ್ರಕರಣಗಳಲ್ಲಿ ವಾದಿ, ಪ್ರತಿವಾದಿ 1 ಮತ್ತು 4 ರವರು ಪಕ್ಷಗಾರರಲ್ಲ

This is a True Copy of the Court Records Online. Authenticated @ districts.ecourtsindia.com/cnr/KABR510017902022/truecopy/order-5.pdf

www.ecourtsindia.com

ಎಂದರೆ ಸರಿ. 1992 ರ ಸಾಲಿನಲ್ಲಿ 2 ನೇ ಪ್ರತಿವಾದಿಗೆ ಸರ್ವೆ ನಂ.35 ರಲ್ಲಿ 8 ಎಕರೆ ಜಮೀನು ಉಳಿದಿತ್ತು. ಆ ಸಾಲಿನಲ್ಲಿ 2 ನೇ ಪ್ರತಿವಾದಿಗೆ ಯಾವುದೇ ಜಮೀನು ಉಳಿದುಕೊಂಡಿರಲಿಲ್ಲ ಎಂದರೆ ಸುಳ್ಳು. 1992 ರ ಸಾಲಿನಲ್ಲಿ 2 ನೇ ಪ್ರತಿವಾದಿ ಹೆಸರಿನಲ್ಲಿ ಸರ್ವೆ ನಂ.35 ರ ಯಾವುದೇ ಕಂದಾಯದ ದಾಖಲೆಗಳು ಇರಲಿಲ್ಲ ಎಂದರೆ ಸುಳ್ಳು.

ಯುಸುಫ್ ಖಾನ್ ರವರು ಸರ್ವೆ ನಂ.35 ರಲ್ಲಿ 5-5 ಗುಂಟೆಗೆ ಮಾಲೀಕರಾಗಿದ್ದರು ಎಂದರೆ ಸುಳ್ಳು. ಯುಸುಫ್ ಖಾನ್ ರವರ ಹೆಸರಿನಲ್ಲಿ ಸರ್ವೆ ನಂ.35 ರಲ್ಲಿ 5-5 ಗುಂಟೆಗೆ ಕಂದಾಯದ ದಾಖಲೆಗಳು ಇತ್ತು ಎಂದರೆ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳೆಂದು ಗೊತ್ತಿಲ್ಲ. 1 ನೇ ಪ್ರತಿವಾದಿ ಮರಣ ನಂತರ ಅವರ ಎಲ್ಲಾ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಪಕ್ಷಗಾರರನ್ನಾಗಿ ಮಾಡಿದ್ದು, ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ್ದ OS186/1998 ರ ದಾವೆ ನನ್ನ ಗೈರು ಹಾಜರಿಯಂತೆ ವಜಾ ಆಗಿತ್ತು ಎಂದರೆ ಸರಿ. ಆ ನಂತರ ಸಲ್ಲಿಸಿದ್ದ ಮಿಸ್ ಅರ್ಜಿಯು ಸಹ ವಜಾ ಆಗಿರುತ್ತದೆ ಎಂದರೆ ಹೌದು. ಆ ನಂತರ ಸದರಿ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಪೀಲೂ ಸಲ್ಲಿಸಿದ್ದೇ ಎಂದರೆ ಸರಿ. ಸದರಿ ದಾವೆ ವಜಾ ಆದ ಅವಧಿಯಲ್ಲಿ 1 ನೇ ಪ್ರತಿವಾದಿ ಮತುತ ಆತನ ವಾರಸುದಾರರು 4 ನೇ ಪ್ರತಿವಾದಿಗೆ ಒಂದು ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಈ ದಾವೆಯಲ್ಲಿ 4 ನೇ ಪ್ರತಿವಾದಿಯನ್ನು ಯಾವ ಕಾರಣಕ್ಕಾಗಿ ಪಕ್ಷಗಾರನ್ನಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಪೀಲೂ ನಡೆಯುತ್ತಿದ್ದಾರೆ 1 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ ಎಂದು ಹೇಳಿ ಅರ್ಜಿ ಸಲ್ಲಿಸಿದ ಕಾರಣ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಈಗ ನೋಡುತ್ತಿರುವ ದಿನಾಂಕಃ 30-07-2005 ರ ಕ್ರಯ ಪತ್ರ ಸದರಿ ದಾಖಲೆ ಎಂದರೆ ಸೃಷ್ಟಿ ಮಾಡಿಕೊಂಡಿರುವ ದಾಖಲೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರಕ್ಕೆ ನಾನು ಮತುತ ನನ್ನ ಹೆಂಡತಿಯಾದ ವಾದಿ ಸಹ ಸಾಕ್ಷಿಯಾಗಿ ಸಹಿ ಮಾಡಿದ್ದೇವೆ ಎಂದರೆ ಸುಳ್ಳು. ಸಾಕ್ಷಿಗೆ ಸದರಿ ಕ್ರಯ

This is a True Copy of the Court Records Online. Authenticated @ districts.ecourtsindia.com/cnr/KABR510017902022/truecopy/order-5.pdf

www.ecourtsindia.com

ಪತ್ರವನ್ನು ತೋರಿಸಿದ್ದು ನಾವು ಸಾಕ್ಷಿಯಾಗಿ ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ಸಹಿಗಳನ್ನು ತಜ್ಞರ ಪರಿಶೀಲನೆಗೆ ಕಳುಹಿಸಲು ನನ್ನ ತಕರಾರು ಇಲ್ಲ. ನಿಪಿ. 1 ರಲ್ಲಿರುವ ಸಹಿ ವಾದಿಯದ್ದು ಎಂದರೆ ಹೌದು. ನಿಪಿ. 1 ರಲ್ಲಿರುವ ಸಹಿ ಮತ್ತು ಕ್ರಯ ಪತ್ರದಲ್ಲಿರುವ ವಾದಿಯ ಸಹಿ ಬೇರೆ ಬೇರೆ ಇದೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದೇ ಇರುತ್ತದೆ. ಸದರಿ ಪ್ರಮಾಣ ಪತ್ರದಲ್ಲಿರುವ ನನ್ನ ಸಹಿ ಮತ್ತು ಮೇಲೆ ಹೇಳಿದ ಕ್ರಯ ಪತ್ರದಲ್ಲಿರುವ ಸಹಿ ನನ್ನದೇ ಎಂದರೆ ಸರಿಯಲ್ಲ. ಬೇರೆ ಬೇರೆ ಇದೆ ಎಂದು ನುಡಿಯುತ್ತಾರೆ.

ನಾನು ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ಯಾರದ್ದು ಎಂದರೆ ಸಾಕ್ಷಿ ನಮ್ಮದಲ್ಲ ಎಂದು ನುಡಿಯುತ್ತಾರೆ. ನಾನು ಗಿಡ್ಡಪ್ಪನಹಳ್ಳಿ ಗ್ರಾಮದಲ್ಲಿ ವಾಸ ಇದ್ದೇನೆ. ಸೂಲಿಬೆಲೆ ಹೋಬಳಿಯ ನಾಗರಾಜು ಬಿನ್ ವೆಂಕಟರಮಣಪ್ಪನವರ ಪರಿಚಯ ಇಲ್ಲ. ಅದೇ ರೀತಿ ನಂಜಪ್ಪ ಬಿನ್ ಮುನಿಯಪ್ಪ ಒಳಗೇರೆ ಗ್ರಾಮ ಎಂಬುವವರ ಪರಿಚಯ ಇಲ್ಲ. 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ ಅವರಿಗೆ ಮಕ್ಕಳಿಲ್ಲದೆ ಮರಣ ಹೊಂದಿದ ನಂತರ  ಅವರ ಸಹೋದರನಾದ ಪ್ರವೀಣ್ ಕುಮಾರ್ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸುಳ್ಳು. ಈ ದಾವೆ ಸಲ್ಲಿಸುವ ಕಾಲದಲ್ಲಿ ಸಹ ನಾವು ದಾವಾ ಸ್ವಾದೀನದಲ್ಲಿ ಇಲ್ಲ ಎಂದರೆ ಸುಳ್ಳು. ಎ.ಸಿ ನ್ಯಾಯಾಲಯದವರು ಪುನಃ ವಿಚಾರಣೆಗಾಗಿ ತಹಶೀಲ್ದಾರರಿಗೆ ಆದೇಶ ಮಾಡಿದ್ದರು ಎಂದರೆ ಹೌದು. ಆ ನಂತರ ತಹಶೀಲ್ದಾರರು ಸ್ಥಳ ಪರಿಶೀಲನೆ ಮಾಡಿ ಮಹಜರ್ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ.

ಮುಂದೂವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.

This is a True Copy of the Court Records Online. Authenticated @ districts.ecourtsindia.com/cnr/KABR510017902022/truecopy/order-5.pdf